ಸಿ.ಸಿ. ನಂಬರ್ಃ **219/2017**
ಸಿ.ಡಬ್ಲ್ಯು: **13** ಪಿ.ಡಬ್ಲ್ಯು: **8**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ
ನ್ಯಾಯಾಲಯದಲ್ಲಿ, ಧಾರವಾಡ

ಸಿ.ಸಿ. ನಂಬರ್ಃ **219/2017**

| | |
|---|---|
| ಸಾಕ್ಷಿಯ ಹೆಸರು | : ರಾಮಚಂದ್ರ |
| ತಂದೆಯ ಹೆಸರು | : ದುರುಗಪ್ಪ ನೀಲಣ್ಣವರ್ |
| ವಯಸ್ಸು | : 66 ವರ್ಷ |
| ಉದ್ಯೋಗ | : ನಿವೃತ್ತ ಪಿ ಎಸ್ ಐ, ಧಾರವಾಡ |
| ವಾಸಸ್ಥಳ | : ಧಾರವಾಡ |

ದಿಃ **08-02-2024** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನಾನು 2013 ರಿಂದ 2017 ರವರೆಗೆ ಧಾರವಾಡ ಉಪನಗರ ಪೋಲಿಸ್ ಠಾಣೆ ಯಲ್ಲಿ ಹೆಚ್ಚುವರಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ05-08-2015 ರಂದು ಚಾಸಾ.1 ರವರು ಠಾಣೆಗೆ ಹಾಜರು ಆಗಿ ಮಧ್ಯಾಹ್ನ 4.00 ಗಂಟೆ ಸುಮಾರಿಗೆ ಲಿಖಿತ ಪಿರ್ಯಾದಿ ನೀಡಿದ ಮೇರೆಗೆ ಅದನ್ನು ನಮ್ಮ ಠಾಣಾ ಗುನ್ನಾ ನಂ.136/2015 ಕಲಂ.304(ಎ) ಐಪಿಸಿ ನೇದ್ದರಲ್ಲಿ ಪ್ರಕರಣ ದಾಖಲಿಸಿ, ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಧಾರವಾಡ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಮೃತ ಬಸವಣ್ಣೆಪ್ಪ ಯಲ್ಲಪ್ಪ ಬೆಟಗೇರಿ ಈತನ ಶವ ಪಂಚನಾಮೆಯನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ಸಂಜೆ 5.15 ರಿಂದ 6.15 ರವರೆಗೆ ಜರುಗಿಸಿರುತ್ತೇನೆ. ಆ ಕಾಲಕ್ಕೆ ಛಾಯಾಚಿತ್ರ ತೆಗೆಸಿರುತ್ತೇನೆ. ನಂತರ ಮೃತ ದೇಹವನ್ನು ಶವ ಪರೀಕ್ಷೆ ಕುರಿತು ವೈದ್ಯಾಧಿಕಾರಿಗೆ ಹಸ್ತಾಂತರಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ.6 ರಿಂದ 9 ರವರ ಹೇಳಿಕೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ06-08-2015 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ.4 ಮತ್ತು 5 ರವರ ಸಮಕ್ಷಮ ಸಾಯಂಕಾಲ 4.00 ರಿಂದ 5.30 ಗಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆ ಜರುಗಿಸಿ ಆ ಕಾಲಕ್ಕೆ ಛಾಯಾಚಿತ್ರ ತೆಗೆಸಿರುತ್ತೇನೆ. ದಿಃ 10-08-2015 ರಂದು ನಮ್ಮ ಸಿಬ್ಬಂದಿಯಾದ ಚಾಸಾ.10 ರವರ ಹೇಳಿಕೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ13-08-2015 ರಂದು ಚಾಸಾ.12 ರವರಿಗೆ ಘಟನಾಸ್ಥಳದಲ್ಲಿ ಲಿಪ್ಟ ಇದ್ದ ಬಗ್ಗೆ ವರದಿಯನ್ನು ಪೂರೈಸುವಂತೆ ಅರ್ಜಿ ಸಲ್ಲಿಸಿರುತ್ತೇನೆ. ದಿಃ01-04-2016 ರಂದು ಚಾಸಾ.12 ರವರ ಮೇಲಾಧಿಕಾರಿರವರಿಗೆ ತನಿಖಾ ವರದಿಯನ್ನು ಪೂರೈಸುವಂತೆ ಅರ್ಜಿ ಸಲ್ಲಿಸಿರುತ್ತೇನೆ. ದಿಃ15-08-2015 ರಂದು ಸದರಿ ಪ್ರಕರಣದಲ್ಲಿಯ ಆರೋಪಿತನನ್ನು ದಸ್ತಗಿರಿ ನಿಯಮಾವಳಿ ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಮೃತನ ಪಿ ಎಂ ವರದಿಯನ್ನು ಹಾಗೂ ಚಾಸಾ.12 ರವರ ಕಚೇರಿಯಿಂದ ವರದಿ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ13-02-2017 ರಂದು ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರ ಇರುವ ಕಾರಣ ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಪಿರ್ಯಾದಿಯನ್ನು ತೋರಿಸಲಾಗಿ ಅವರು ಅದನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಶವಪಂಚನಾಮೆಯನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಪಿ ಎಮ್ ವರದಿಯನ್ನು ಈಗಾಗಲೇ ನಿಪಿ. 4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಪಾವತಿ ಬೇಸ್ಮಿಯನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ಚಾಸಾ.12 ರವರಿಗೆ ಹಾಗೂ ಅವರ ಮೇಲಾಧಿಕಾರಿಗಳಿಗೆ ನೀಡಿದ ಅರ್ಜಿಗಳನ್ನು ನಿಪಿ.7 ಮತ್ತು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. 14 ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ.9 ರಿಂದ ನಿಪಿ.22 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಆರ್ ವಿ ಕೆ ರವರಿಂದಃ

ತನಿಖೆಯನ್ನು ನಾನು ಮಾತ್ರ ಮಾಡಿರುತ್ತೇನೆ. ಲಿಫ್ಟ ಆಪರೇಟರ್ ನ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಲಿಫ್ಟ ಆಪರೇಟರ್ ಈತನು ಸ್ಥಳದಲ್ಲಿ ಹಾಜರು ಇರಲಿಲ್ಲ. ಲಿಫ್ಟ ಆಪರೇಟರ್ ಹೆಸರು ಸುನೀಲ್ ಪ್ರಭು ಎಂದು ಕೇಳಿ ಗೊತ್ತಾಗಿರುತ್ತದೆ. ಆರೋಪಿಯು ಲಿಪ್ಟನ್ನು ಅಳವಡಿಸುವುದು ಮಾಡುತ್ತಾರೆ ಎಂದರೆ ಸಾಕ್ಷಿಯು ಮೇಂಟೇನೆನ್ಸ ನ್ನು ಆರೋಪಿಯು ಮಾಡಿರುತ್ತಾರೆ ಎಂದು ತನಿಖೆಯಲ್ಲಿ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಆರೋಪಿಯು ಲಿಪ್ಟ ಮೇಂಟೇನೆನ್ಸ ಮಾಡುತ್ತಾನೆ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಮೃತನ ಮಗ ಅಗ್ರಿಮೆಂಟ್ ಪ್ರತಿಯನ್ನು ಪೂರೈಸಿರುವುದಾಗಿ ಹೇಳುತ್ತಾರೆ. ಉಚಿತ ಮೆಂಟೆನೆನ್ಸ ಅವಧಿಯು ದಿಃ01-10-2011 ರಿಂದ 30-09-2012 ರವರೆಗೆ ಇತ್ತು ಎಂದರೆ ಸರಿ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಚಾಸಾ.1 ರವರಿಗೆ ಸಹಾಯ ಮಾಡಲು ಖೊಟ್ಟಿ ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 30-09-2012 ರ ನಂತರ ಆರೋಪಿತನೊಂದಿಗೆ ಯಾವುದೇ ಕರಾರು ಪತ್ರ ಇಲ್ಲದಿದ್ದರೂ ಸಹ ಚಾಸಾ.1 ರವರಿಗೆ ಸಹಾಯ ಮಾಡಲು ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.　　　　　　　　　　ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಸಿ.ಸಿ. ನಂಬರ್‌ಃ 219/2017**
**ಸಿ.ಡಬ್ಲ್ಯು: 13 ಪಿ.ಡಬ್ಲ್ಯು: 8**